# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/GLB/1626/2021
ಮಂಡನಾಧಿಕಾರಿಗಳ ಶಾಖೆ: ಎಆರ್‌ಇ-1

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 30-04-2022.
05/05/2022

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ ಸೈಯದ್ ಖುದ್ದೂಸ್, ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ), ಬೀದರ್,** - ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಬೀದರ್ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ಸೈಯದ್ ಖುದ್ದೂಸ್, ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ), ಬೀದರ್,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಮಹ್ಮದ್ ಮುಬೀನ್ ತಂದೆ: ಹುಸೇನಸಾಬ ಪಿಂಜಾರ, ಉಜನಿ ಗ್ರಾಮ, ಔರಾದ(ಬಿ) ತಾ., ಬೀದರ್ ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಮಾಹಿತಿ:** ದೂರುದಾರರ ದೊಡ್ಡಪ್ಪನ ಮಗ ಶೇಖ ಸೈಯದ್ ಇವರಿಗೆ ಔರಾದ ತಾಲ್ಲೂಕಿನ ಗುಡಪಳ್ಳಿ ಗ್ರಾಮದ ಸರ್ವೇ ನಂ: 10 ರಲ್ಲಿ, 2 ಎಕರೆ 14 ಗುಂಟೆ ಜಮೀನು ಇದ್ದು, ಸದರಿ ಜಮೀನಿನಲ್ಲಿ ಗಂಗಕಲ್ಯಾಣ ಯೋಜನೆ ಅಡಿಯಲ್ಲಿ ಕೆ.ಎಂ.ಡಿ.ಸಿ. ವತಿಯಿಂದ ಕೊಳವೆ ಬಾವಿ ಮಂಜೂರು ಆಗಿರುತ್ತದೆ. ಸದರಿ ಶೇಖ್ ಸೈಯದ್ ರವರು ಅನಕ್ಷರಸ್ಥರಾಗಿದ್ದು, ಕಚೇರಿ ಕೆಲಸವನ್ನು ತನ್ನ ಪರವಾಗಿ ಮಾಡಿಕೊಡುವಂತೆ ದೂರುದಾರರಿಗೆ ತಿಳಿಸಿದ್ದು, ಅದರಂತೆ ದೂರುದಾರರು ಎದುರುದಾರರು ಭೇಟಿ ಮಾಡಿದಾಗ 3-4 ದಿನಗಳಲ್ಲಿ ಕೆಲಸವನ್ನು ಮಾಡಿಕೊಡುವುದಾಗಿ ತಿಳಿಸಿರುತ್ತಾರೆ. ದಿನಾಂಕ: 19-6-2018 ರಂದು ದೂರುದಾರರು ಎದುರುದಾರರಾದ ನಿಮ್ಮನ್ನು ನಿಮ್ಮ ಕಚೇರಿಯಲ್ಲಿ ಭೇಟಿ ಮಾಡಿ ತನ್ನ

ಅಣ್ಣನ ಹೊಲಕ್ಕೆ (ದೊಡ್ಡಪ್ಪನ ಮಗ) ಬೋರ್‌ವೇಲ್ ಗಾಡಿ ಕಳುಹಿಸಿಕೊಡಲು 5000/- ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಆಗ ದೂರುದಾರರು ಎದುರುದಾರರಾದ ನಿಮಗೆ 5000/- ರೂ. ನಾಳೆ ತಂದು ಕೊಡುತ್ತೇನೆಂದು ಹೇಳಿದಾಗ, ಸದರಿ ಸಂಭಾಷಣೆ ದೂರುದಾರರ ಮೊಬೈಲ್‌ನಲ್ಲಿ ಧ್ವನಿ ಮುದ್ರಿತವಾಗಿರುತ್ತದೆ. ದೂರುದಾರರಿಗೆ ಲಂಚದ ಹಣ ನೀಡಿ ಕೆಲಸ ಮಾಡಿಸಿಕೊಳ್ಳಲು ಇಷ್ಟವಿಲ್ಲದ್ದರಿಂದ, ದಿನಾಂಕ: 20-06-2018 ರಂದು ಪೋಲಿಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬೀದರ್, ಇವರಿಗೆ ಎದುರುದಾರರ ವಿರುದ್ಧ ದೂರನ್ನು ನೀಡಿರುತ್ತಾರೆ ಹಾಗೂ ಸಂಭಾಷಣೆ ಇದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಅದರಂತೆ, ಮೊಕದ್ದಮೆ ಸಂಖ್ಯೆ : 04/2018 ಪಿಸಿ ಕಾಯ್ದೆ 1988 ಕಲಂ 7 ರನ್ವಯ ಪ್ರ.ವ. ವರದಿ ದಾಖಲಾಗಿರುತ್ತದೆ.

3. ನಂತರ ತನಿಖಾಧಿಕಾರಿಯವರು ಪಂಚರುಗಳಾದ ಪಂಚ-1 ಶ್ರೀ ಬಸವರಾಜು, ಪಂಚ-2 ಶ್ರೀ ರಮೇಶ ಇವರನ್ನು ಬರಮಾಡಿಕೊಂಡು, ಇವರಿಗೆ ದೂರುದಾರರನ್ನು ಪರಿಚಯಿಸಿ ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ 5000/- ರೂ.ಗಳನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಯ ಸೂಚನೆ ಮೇರೆಗೆ, ಪಂಚರುಗಳು ನೋಟಿನ ಮೌಲ್ಯ ಮತ್ತು ನಂಬರುಗಳನ್ನು ಪ್ರತ್ಯೇಕ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ನಂತರ ಪೋಲೀಸ್ ಸಿಬ್ಬಂದಿ ಸದರಿ 500/- ರೂ. ಮುಖ ಬೆಲೆಯ 10 ನೋಟುಗಳಿಗೆ ಪಿನಾಪ್ತಿಲಿನ್ ಪೌಡರ್ ಲೇಪಿಸಿದ್ದು, ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚ-2 ರಮೇಶರವರು ತಮ್ಮ ಎರಡೂ ಕೈಗಳಿಂದ ಎಣಿಸಿ ದೂರುದಾರರ ಶರ್ಟಿನ ಎಡಎದೆ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯು ದೂರುದಾರರಿಗೆ ಸೂಚನೆಯನ್ನು ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದ ನಂತರ ದೂರುದಾರರು ತನ್ನ ಮುಖವನ್ನು ಕರವಸ್ತ್ರದಿಂದ ಒರೆಸಿಕೊಡುವ ಮೂಲಕ ಸನ್ನೆ ನೀಡಲು ತಿಳುವಳಿಕೆ ನೀಡಿದ್ದು ಹಾಗೂ ದೂರುದಾರರು ಮತ್ತು ಎದುರುದಾರರ ನಡುವೆ ನಡೆಯುವ ಸಂಭಾಷಣೆಯನ್ನು ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಳ್ಳಲು ಸೂಚನೆ ನೀಡಿರುತ್ತಾರೆ ಮತ್ತು ದೂರುದಾರರಿಂದ, ಎದುರುದಾರರು ಲಂಚಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಒಂದು ಡಿ.ವಿ.ಡಿ ನಲ್ಲಿ ಮುದ್ರಿಸಿರುತ್ತಾರೆ. ಅದೇ ದಿನ, ದಿನಾಂಕ: 20-06-2018, ತನಿಖಾಧಿಕಾರಿಯವರು ಪಂಚರ ಸಮಕ್ಷಮ ವಹಿಸಿಕೊಡುವ ಪಂಚನಾಮೆ ಮಾಡಿರುತ್ತಾರೆ.

4. ಅದೇ ದಿನ, ದಿನಾಂಕ: 20-06-2018 ರಂದು, ದೂರುದಾರರು ಹಾಗೂ ಪಂಚ-2 ರೊಂದಿಗೆ ಎದುರುದಾರರು ಕರ್ತವ್ಯ ನಿರ್ವಹಿಸುವ ಕೊಠಡಿಗೆ ಹೋಗಿ ಯಲ್ಲಪ್ಪ (ಹೊರಗುತ್ತಿಗೆ ನೌಕರ) ರವರನ್ನು ಭೇಟಿಯಾಗಿ ಕೆಲಸದ ಬಗ್ಗೆ ವಿಚಾರಿಸಿದಾಗ, ಎದುರುದಾರರು ಬೆಂಗಳೂರಿಗೆ ಹೋಗಿರುತ್ತಾರೆ. ನಿಮ್ಮ ಕೆಲಸದ ಬಗ್ಗೆ ಮತ್ತು ಲಂಚದ ಹಣದ ಬಗ್ಗೆ ಎದುರುದಾರರು ಯಲ್ಲಪ್ಪ (ಹೊರಗುತ್ತಿಗೆ ನೌಕರ) ರವರಿಗೆ ತಿಳಿಸಿರುತ್ತಾರೆ ಎಂದು ಯಲ್ಲಪ್ಪ ದೂರುದಾರರಿಗೆ ಹೇಳಿರುತ್ತಾರೆ ಹಾಗೂ ಯಲ್ಲಪ್ಪ(ಹೊರಗುತ್ತಿಗೆ ನೌಕರ) ದೂರುದಾರರನ್ನು ಎದುರುದಾರರು ಹೇಳಿದಷ್ಟು ಹಣವನ್ನು ತಂದಿರುವಿಯಾ ಎಂದು ಕೇಳಲಾಗಿ, ದೂರುದಾರರು 5000/- ಫಿನಾಪ್ತಿಲೀನ್ ಪೌಡರ್ ಲೇಪಿತ ಲಂಚದ ಹಣವನ್ನು ಯಲ್ಲಪ್ಪ (ಹೊರಗುತ್ತಿಗೆ ನೌಕರ) ರವರಿಗೆ ನೀಡಿರುತ್ತಾರೆ. ಸದರಿ ಹಣವನ್ನು ಯಲ್ಲಪ್ಪ ಬಲಗೈಯಿಂದ ಸ್ವೀಕರಿಸಿ ಎರಡೂ ಕೈಗಳಿಂದ ಎಣಿಸಿ ಲಂಚದ ಹಣವನ್ನು ತನ್ನ ಶರ್ಟಿನ ಎಡ ಎದೆಯ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ,

ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ನೀಡಿದ ಬಳಿಕ ತನಿಕಾಧಿಕಾರಿಯವರು ಸ್ಥಳಕ್ಕೆ ಬಂದಾಗ, ಯಲ್ಲಪ್ಪ (ಹೊರಗುತ್ತಿಗೆ ನೌಕರ) ರವರನ್ನು ದೂರುದಾರರು ತನಿಖಾಧಿಕಾರಿಗೆ ತೋರಿಸಿದ ಮೇರೆಗೆ, ತನಿಖಾಧಿಕಾರಿಯವರು ಎದುರುದಾರರ ವಿರುದ್ಧ ಪ್ರಕರಣ ದಾಖಲಾದ ಬಗ್ಗೆ ತಿಳಿಸಿ, ಹಾಗೂ ಯಲ್ಲಪ್ಪ (ಹೊರಗುತ್ತಿಗೆ ನೌಕರ) ಇವರನ್ನು 2ನೇ ಆರೋಪಿಯೆಂದು ಪರಿಗಣಿಸಿ, ತನಿಖೆಯನ್ನು ಪ್ರಾರಂಭಿಸಿ ದೂರುದಾರರಿಂದ ಪಡೆದ ಲಂಚದ ಹಣ 5000/- ರೂ.ಗ್ಳನ್ನು ತನಿಖಾಧಿಕಾರಿಯು ಪಂಚರ ಸಮಕ್ಷಮ ಪಂಚನಾಮೆ ಮೂಲಕ ಅಮಾನತ್ತು ಪಡಿಸಿಕೊಂಡು ಮಹಜರ್ ಕ್ರಮ ಜರುಗಿಸಿರುತ್ತಾರೆ.

5. ಸದರಿ ಹಣದ ಬಗ್ಗೆ ತನಿಖಾಧಿಕಾರಿಯು, ಎದುರುದಾರರ ಸಹಾಯಕ ಯಲ್ಲಪ್ಪ (ಹೊರಗುತ್ತಿಗೆ ನೌಕರ) ರವರನ್ನು ವಿಚಾರಿಸಿದಾಗ, ಹಾಗೂ ಎದುರುದಾರರು ದಿನಾಂಕ: 21-6-2018 ರಂದು ದಸ್ತಗಿರಿ ಮಾಡಿ ನಿಮ್ಮನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ನೀಡಿರುವುದಿಲ್ಲ. ತನಿಖಾಧಿಕಾರಿಯು ಡಿ.ವಿ.ಡಿ ಯಲ್ಲಿ ದಾಖಲಾದ ಸಂಭಾಷಣೆಯನ್ನು ಪಂಚರ ಸಮಕ್ಷಮ ಲ್ಯಾಪ್‌ಟ್ಯಾಪ್ ನಲ್ಲಿ ಹಾಕಿ ಕೇಳಿಸಿದಾಗ, ಎದುರುದಾರರ ಧ್ವನಿಯನ್ನು ಅಂದರೆ ಸಂಭಾಷಣೆಯಲ್ಲಿನ ಲಂಚದ ಬೇಡಿಕೆ ಇಟ್ಟ ಗಂಡು ಧ್ವನಿಯು, ಎದುರುದಾರರ ಧ್ವನಿಯೆಂದು, ನಿಮ್ಮ ಕಚೇರಿಯ ಸಹಾಯಕ ಅಧಿಕಾರಿಯಾದ ಮೋಹಿನ ಪಟೇಲ, ಜಿಲ್ಲಾ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ), ಬೀದರ್ ಇವರು ದೃಢೀಕರಿಸಿರುತ್ತಾರೆ.

6. ತನಿಖಾಧಿಕಾರಿಯು ಡಿ.ವಿ.ಡಿ ಯಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಮಾದರಿ ಧ್ವನಿಗೆ ಹೋಲಿಕೆ ಬಗ್ಗೆ ವರದಿಯನ್ನು ಕೋರಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ.

7. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರಾದ ನಿಮ್ಮನ್ನು ಸೇವೆಯಿಂದ ವಜಾ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

8. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಫ್ತಲೀನ್ ಅಂಶ ಇರುವುದು ದೃಢಪಟ್ಟಿದೆ.

9. ಗೌರವಾನ್ವಿತರ ಆದೇಶದ ಅನ್ವಯ, ದಿನಾಂಕ: 21/12/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 17/01/20212 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ದೂರುದಾರರು ಎದುರುದಾರರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತಾರೆಂದು ಹಾಗೂ ಎದುರುದಾರರು ದೂರುದಾರರಿಂದ ಯಾವುದೇ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುವುದಿಲ್ಲ ಹಾಗೂ ಲಂಚದ ಹಣ 5000/- ರೂ.ಗಳನ್ನು ತಾನು ಪಡೆದಿರುವುದಿಲ್ಲ ಎಂದು ಹೇಳಿರುತ್ತಾರೆ. ತಾನು ದಾಳಿ ವೇಳೆಯಲ್ಲಿ ಟ್ರ್ಯಾಪ್ ದಿನಾಂಕದಂದು ಎದುರುದಾರರು ಕಛೇರಿಯಲ್ಲಿ ಇರಲಿಲ್ಲವೆಂದು ಹಾಗೂ ಎ.ಸಿ.ಬಿ. ರವರು ತನ್ನ ಹಾಗೂ ಕೇಸ್ ವರ್ಕ್‌ರ್ ಎಲ್ಲಪ್ಪ ಇವರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆಂದು ಹೇಳಿರುತ್ತಾರೆ.

ಎ.ಸಿ.ಬಿ ಪೊಲೀಸರು ಎದುರುದಾರರನ್ನು ಕಛೇರಿಗೆ ಕರೆಸಿಕೊಂಡು ದಸ್ತಗಿರಿ ಮಾಡಿರುತ್ತಾರೆ. ಎ.ಸಿ.ಬಿ ಪೊಲೀಸರು ತನ್ನ ಹಾಗೂ ಎಲ್ಲಪ್ಪ ರವರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ದಾಖಲಿಸಿರುತ್ತಾರೆ. ಎದುರುದಾರರು ದೂರುದಾರರಿಂದ ಯಾವುದೇ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುವುದಿಲ್ಲ, ಹಾಗೂ ಲಂಚದ ಹಣ ಪಡೆದಿರುವುದಿಲ್ಲವಾದರಿಂದ ತನ್ನ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಹಾಗಾಗಿ ಇವರ ವಿರುದ್ಧ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡದೇ ಇರಲು ಸೂಕ್ತ ಕಾರಣಗಳು ಕಂಡುಬಂದಿರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ.

10. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ/ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

11. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೆ, ಕರ್ತವ್ಯ ಶ್ರದ್ದೆಯನ್ನು ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

K.N. Phanindra 05/05/2022

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು